ಕೈಗಳಲ್ಲಿ ಸಿಕ್ಕಿಸಿದ್ದ ಹಿತ್ತಾಳೆಯ ತಾಳಗಳಿಂದ ಛನ್ ಛನ್ ಎಂದು ಚಪ್ಪಾಳೆ ತಟ್ಟುತ್ತಿದ್ದ ಗೊಂಬೆ ಅವಳ ನೆನಪಿನಾಳದಿಂದ ಮೂಡಿ ಮಾಯವಾಯಿತು.

ಅಂತೂ ಇಂತೂ ಈ ಎಲ್ಲಾ ಗೊಂದಲಗಳ ನಡುವೆಯೂ ಆಕೆ ಸಮಾನಾಂತರವಾಗಿ ತನ್ನ ಹಿಂದಿನ ಪ್ರಯತ್ನವನ್ನು ಕೂಡಾ ಮುಂದುವರೆಸಿದ್ದಳು. ಯಾರಾದರೂ ಗುರುತು–ಪರಿಚಯ ಇಲ್ಲವೇ ನೆಂಟರಿಷ್ಟರಲ್ಲಿ ಆದರೆ ಇನ್ನೂ ಒಳಿತು ಎಂಬ ಉದ್ದೇಶದಿಂದ ನನ್ನ ಮಗಳಿಗೊಂದು ಗಂಡು ಕೊಡಿ ಎಂಬ ಕಾರ್ಯಕ್ರಮದಲ್ಲಿ ತದೇಕಚಿತ್ತಳಾಗಿ ತೊಡಗಿಸಿಕೊಂಡಳು. ಮತ್ತು ಮಾತುಕತೆ ಒಂದು ಘಟ್ಟ ತಲುಪುವವರೆಗೂ ಮನೆಯವರಿಗೆ ತಿಳಿಸದಂತೆ ಸಾಕಷ್ಟು ಎಚ್ಚರಿಕೆಯನ್ನು ಕೂಡಾ ವಹಿಸಿದ್ದಳು. ಅಂತೂ ಅವಳ ಈ ಎಲ್ಲಾ ಚಾಕಚಕ್ಯತೆಯು ಒಂದು ಸರಿಯಾದ ಘಟ್ಟವನ್ನು ತಲುಪಿದ್ದೂ ಅಲ್ಲದೆ, ಅವಳ ಮನದಾಸೆ ಈಡೇರಿತ್ತು. ಅವಳ ಮಗಳ ಸೆಹರಾದ(ಮದುವೆಯಲ್ಲಿ ವಧೂವರರಿಗೆ ತಲೆಯಿಂದ ಕಾಲಿನವರೆಗೂ ಸಿಂಗರಿಸುವ ಹೂವಿನ ಲಡಿ) ಹೂವುಗಳು ಅರಳಿದ್ದವು. 'ಎಲ್ಲಾ ಆ ನನ್ನ ಪರ್‌ವರ್‌ದಿಗಾರ್‌ನ ದಯೆ' ಎಂದು ಅವನ ಕೃಪೆಯನ್ನು ಸ್ಮರಿಸಿ ಹಿಂದಕ್ಕೆ ಓಡಿದ್ದ ಮನವನ್ನು ಭವಿಷ್ಯದ ಕಾಲಮಾನಕ್ಕೆ ಹೊಂದಿಸಿಕೊಂಡಳು. 'ಓ... ಆಗಲೇ ಒಂದೂವರೆ ಗಂಟೆ ಮಧ್ಯಾಹ್ನದ ನಮಾಜ್ ಮಾಡಿಲ್ಲಾ' ಎಂದು ಆ ಶಾದಿಮಹಲ್‌ನ ಉದ್ದಗಲಕ್ಕೂ ಕಣ್ಣು ಹಾಯಿಸಿದಳು ಎಲ್ಲಾದರೂ ನಮಾಜಿಗೆ ಒಂದಿಷ್ಟು ಜಾಗ ಸಿಗುವುದೇ ಎಂದು. ಬೀಗರೂಟದಲ್ಲಿ ಏನಿರುತ್ತೆ, ಊಟವೇ ಮುಖ್ಯವಲ್ಲವೇ? ಅಂತೆಯೇ ಎಲ್ಲರೂ ಊಟದ ಕಡೆ ಧಾವಿಸುತ್ತಿದ್ದರು. ಊಟ ಮುಗಿಸಿದವರು ಸಂತೃಪ್ತಿಯಿಂದ ಬೀಡಾ ಮೆಲ್ಲುತ್ತಿದ್ದರು.

ಇಂದೂ ಕೂಡ ಅಲ್ಲಿ ನೆರೆದಿದ್ದ ನೂರಾರು ಮಂದಿಯ ಎದುರಿಗೆ 'ಸುಬಹ್ ತಕ್ ಕರೂಂ ಪ್ಯಾರ್'ಎಂದು ರಿಂಗ್‌ಟೋನಿನಲ್ಲಿ ಹಾಡುತ್ತಿದ್ದ ಈ ಹಾಡುಗಾರನ ಗಂಟಲಾದರೂ ಬಿದ್ದು ಹೋಗಬಾರದೇ ಎಂದು ಮನದಲ್ಲಿಯೇ ಶಾಪ ಹಾಕುತ್ತಾ ಫೋನಿನ ಕರೆಯನ್ನು ಒಳಬರುವಂತೆ ಗುಂಡಿಯನ್ನು ಅದುಮಿದಳು. ಅಂದಿನ ಸಂದರ್ಭಕ್ಕೆ ತಕ್ಕಂತೆ, ಯಾರೋ ತನಗೆ ಶುಭಾಶಯ ಕೋರಲು ಕರೆ ಮಾಡಿದ್ದಾರೆ ಎಂದೆನ್ನುಕೊಳ್ಳುತ್ತಾ, 'ಹಲೋ'ಎಂದಳು.

'ಅಸ್ಸಲಾಮ್‌ವಲೇಕುಮ್ ಆಪಾ... ಅಲ್ಲಿ ಯಾರೂ ಇಲ್ಲ ತಾನೇ?'

ಇದೆಂತಹ ಪ್ರಶ್ನೆ? ಶಾದಿಮಹಲ್ ತುಂಬಾ ಜನರಿರುತ್ತಾರೆ ತಾನೇ. ವಲೀಮಾ ಸಮಾರಂಭಕ್ಕೆ? ಆದರೂ ಪಿಸುಗುಡುತ್ತಿದ್ದ, ಆ ಧ್ವನಿಯ ಆಳವಾದ ಹತಾಶೆ ಆಕೆಯ ಬೆನ್ನು ಹುರಿಯಗುಂಟ ತಣ್ಣಗಾದಂತೆನಿಸಿ, ಅಷ್ಟೇ ಪಿಸುನುಡಿಯಲ್ಲಿ ಆಕೆ 'ಯಾಕೆ... ಯಾಕೆ... ತುಂಬ ಜನರಿದಾರಲ್ಲ ಇಲ್ಲಿ. ನೀವು ಯಾರು ತಿಳೀತಿಲ್ಲವಲ್ಲಾ...' ಎಂದಳು.

'ಅಯ್ಯೋ ಗೊತ್ತಾಗಲಿಲ್ಲವೇ? ನಾನು ಸಾದಿಕಾ... ಆಪಾ ಕೇಳಿದಿರಾ ಸುದ್ದಿ? ನಿಮ್ಮ ಎದೆ ಒಡೆದು ಹೋಗುತ್ತೆ' ಎಂದಳು.

ಅವಳು ಉತ್ತರಿಸುವುದಕ್ಕಿಂತ ಮುನ್ನವೇ ಫಹದ್‌ನ ಅಣ್ಣ ಬಂದವನೇ 'ಚಿಕ್ಕಮ್ಮ ಬನ್ನಿ... ಬನ್ನಿ... ನೋಡಿ ನಿಮಗಾಗಿ ಇಲ್ಲಿ ಕುರ್ಚಿ ಖಾಲಿ ಇರಿಸಿದ್ದೇನೆ. ಬೇಗ ಕೂತುಕೊಳ್ಳಿ. ಬಿಸಿ ಬಿಸಿ ಬಿರಿಯಾನಿ ತರ್‍ತೀನಿ' ಎನ್ನುವುದಕ್ಕೂ ಮೊಬೈಲ್ ಕುಂಯಿ ಕುಂಯಿ ಎನ್ನುತ್ತಾ ಕೊನೆಯುಸಿರೆಳೆಯುವುದಕ್ಕೂ ಸರಿಹೋಯಿತು.

ಅವಳು ಅಲ್ಲೇ ಇದ್ದ ಒಂದು ಖುರ್ಚಿಯಲ್ಲಿ ಕುಸಿದಳು. ಮತ್ತು ಸುತ್ತಲೂ ಖಾಲಿ ಖಾಲಿ ನೋಟವನ್ನು ಬೀರುತ್ತಾ, ಯಾರನ್ನೋ ಹುಡುಕತೊಡಗಿದಳು. ಅತ್ತಲಿಂದ ಹಾದು ಹೋಗುತ್ತಿದ್ದ